ದಿನಾಂಕಃ 19-09-2018 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋದಿಸಲಾಯಿತು.

–ಃಃ ಪಾಟೀ ಸವಾಲುಃ ಶ್ರೀ ಹೆಚ್ ಬಿ ವಿ 2 ರಿಂದ 4 ನೇ ಪ್ರತಿವಾದಿ ಪರ ವಕೀಲರಿಂದ ಃಃ

ನಾನು 7 ನೇ ತರಗತಿ ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ . ಈ ದಾವೆಯು ಭದ್ರಪ್ಪ , ಗಿರಿಯಪ್ಪ ಇವರ ನಡುವೆ ಹಾಕಲಾಗಿದೆ . ಜಮೀನು ವಿಚಾರವಾಗಿ ಈ ದಾವೆಯನ್ನು ಹಾಕಿರುತ್ತಾರೆ. ಈರಜ್ಜ ಇವರಿಗೆ ತಿಮ್ಮಪ್ಪ , ದಾಸಪ್ಪ , ಈರಪ್ಪ 3 ಜನ ಮಕ್ಕಳು. ಈರಜ್ಜನನ್ನು ನಾನು ನೋಡಿಲ್ಲ. ಅವರ ಮಕ್ಕಳ ಪೈಕಿ ತಿಮ್ಮಣ್ಣ ಇವರನ್ನು ಮಾತ್ರ ನೋಡಿದ್ದೇನೆ ಉಳಿದ ಇಬ್ಬರು ಮಕ್ಕಳನ್ನು ನೋಡಿಲ್ಲ.. ಸದರಿ ಈರಜ್ಜನ ಮಗ ಈರಪ್ಪನ ಮಕ್ಕಳು ಬದುಕಿದ್ದಾಗಿ ಏನೇನು ವ್ಯವಹಾರ ಮಾಡಿಕೊಂಡಿದ್ದರು ಎಂದು ನನಗೆ ಗೊತ್ತಿಲ್ಲ . ಸದರಿ ಈರಪ್ಪನಿಗೆ ದಾಸಪ್ಪ ಎನ್ನುವ ಮಗ ಇದ್ದ ಬಗ್ಗೆ ನನಗೆ ಗೊತ್ತಿತ್ತು . ಸದರಿ ದಾಸಪ್ಪನಿಗೆ ರುದ್ರಮ , ಗಿರಿಯಮ್ಮ ಮಕ್ಕಳು ಇದ್ದರು ಎನ್ನುವ ವಿಚಾರ ನನಗೆ ಗೊತ್ತಿರಲಿಲ್ಲ. ಸದರಿ ರುದ್ರಮ್ಮ , ಗಿರಿಯಮ್ಮ ನಮ್ಮ ಊರಿನಲ್ಲಿ ವಾಸ ಇದ್ದರು ಎನ್ನುವ ವಿಚಾರ ನನಗೆ ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ನಮ್ಮ ಊರಿನಲ್ಲಿ ಇದ್ದ ಜಮೀನಿನ ಬಗ್ಗೆ ಗೊತ್ತು ಬೇರೆ ಊರಿನಲ್ಲಿದ್ದ ಜಮೀನುಗಳ ಬಗ್ಗೆ ಗೊತ್ತಿಲ್ಲ. ಸದರಿ ಈರಪ್ಪ ಸಮುದ್ರದ ಹಳ್ಳಿಯಲ್ಲಿದ್ದ ಜಮೀನುಗಳನ್ನು ಮಾರಾಟ ಮಾಡಿದ್ದರು ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಮ್ಯಾದನಹೊಳೆ ಗ್ರಾಮದಲ್ಲಿ ಅವರಿಗೆ ಸರ್ವೆ ನಂಃ 43 ಜಮೀನು ಇರುತ್ತದೆ . ಸದರಿ ಸರ್ವೆ ನಂಃ 43 ಇದರ ಒಟ್ಟು ವಿಸ್ತೀರ್ಣ 29 ಎಕರೆ 39 ಗುಂಟೆ ಇತ್ತು .

ಸದರಿ ವಿಸ್ತೀರ್ಣಕ್ಕೆ ನನ್ನ ಚಕ್ಕುಬಂದಿ ಹೇಳಲಾಗುವುದಿಲ್ಲ . ಸದರಿ ಜಮೀನು 29 ಎಕರೆ ಇದ್ದಾಗ ನಾನು ನೋಡಿರುತ್ತೇನೆ . ಬಾಯಿ ಮಾತಿನ ಪ್ರಕಾರ ವಿಭಾಗವಾದಾಗ ತಿಮ್ಮಪ್ಪನಿಗೆ 9 ಎಕರೆ 18 ಗುಂಟೆ , ದಾಸಪ್ಪನಿಗೆ 9 ಎಕರೆ 22 ಗುಂಟೆ , ಈರಪ್ಪನಿಗೆ 10 ಎಕರೆ 29 ಗುಂಟೆ ಭಾಗದಲ್ಲಿ ಬಂದಿತ್ತು . ಆ ರೀತಿ ಭಾಗ ಮಾಡಿಕೊಂಡು ಈಗ ಸುಮಾರು 30 ವರ್ಷ ಮೇಲಾಗಿದೆ . ಅವರು ಆ ರೀತಿ ಭಾಗ ಮಾಡಿಕೊಂಡಾಗ ನಾನು ಉಪಸ್ಥಿತನಿರಲಿಲ್ಲ. ದಿಃ 31-1-1986 ರಲ್ಲಿ ಗಿರಿಯಪ್ಪ ಮತ್ತು ಆತನ ಮಕ್ಕಳು ಭಾಗ ಮಾಡಿಕೊಂಡಾಗ ನಾನು ಇರಲಿಲ್ಲ ಆ ಪತ್ರದ ಬಗ್ಗೆ ನನಗೆ ವೈಯಕ್ತಿಕ ಮಾಹಿತಿ ಇಲ್ಲ. ವಾದಿಗಳು ಹಾಗು ಭದ್ರಪ್ಪ ಇವರುಜೀವಂತ ಇದ್ದಾಗ ಭದ್ರಪ್ಪನಿಗೆ ಸೇರಿದ ಮನೆಯಲ್ಲಿ ಒಟ್ಟಿಗೆ ವಾಸ ಇದ್ದರು ಎಂದರೆ ಸರಿ . 2 ನೇ ಪ್ರತಿವಾದಿ ತನ್ನ ಹೆಂಡತಿ ಮಕ್ಕಳ ಜೊತೆ ಪ್ರತ್ಯೇಕ ಮನೆಯಲ್ಲಿ ವಾಸ ಇದ್ದಾರೆಂದರೆ ಸರಿ. 3 ನೇ ಪ್ರತಿವಾದಿ ತನಗೆ ಬಂದ ಭಾಗದಲ್ಲಿ ಹೆಂಡತಿ ಮಕ್ಕಳ ಜೊತೆ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆಂದರೆ ಸರಿ. 4 ನೇ ಪ್ರತಿವಾದಿ ತನಗೆ ಬಂದ ಭಾಗದಲ್ಲಿ ಹೆಂಡತಿ ಮಕ್ಕಳ ಜೊತೆ ಪ್ರತ್ಯೇಕವಾಗಿ ವಾಸ ಮಾಡುತ್ತಿದ್ದಾರೆಂದರೆ ಸರಿ. 8 ರಿಂದ 10 ಪ್ರತಿವಾದಿಗಳು ಸಹ ಪ್ರತ್ಯೇಕ ಮನೆ ಮಾಡಿಕೊಂಡು ಹೆಂಡತಿ ಮಕ್ಕಳ ಜೊತೆ ಪ್ರತ್ಯೇಕವಾಗಿ ವಾಸ ಇದ್ದಾರೆಂದರೆ ಸರಿ .

1996 ರಲ್ಲಿ ವಿಭಾಗವಾದ ನಂತರ ರಂಗಪ್ಪನ ಭಾಗಕ್ಕೆ ಬಂದ ಜಮೀನಿನಲ್ಲಿ ಬೋರ್ ವೆಲ್ ಹಾಕಿಸಿ ಸ್ವಾಧೀನದಲ್ಲಿದ್ದಾರೆಂದರೆ ಸರಿ . 2 ನೇ ಪ್ರತಿವಾದಿ ಬೆಳೆಸಿದ ತೆಂಗಿನ ಮರಗಳು 18 ವರ್ಷ ವಯಸ್ಸಿನವು ಎನ್ನುವುದು ಸರಿ. ಸದರಿ ಜಮೀನಿನಲ್ಲಿ 10 ರಿಂದ 12 ವರ್ಷ ವಯಸ್ಸಿನ ಅಡಿಕೆ ಮರ ಸಹ ಇದೆ ಎಂದರೆ ಸರಿ . 3 , 4 ನೇ

ಪ್ರತಿವಾದಿಗಳು ಜಮೀನಿನಲ್ಲಿ ಬೋರ್ ವೆಲ್ ಹಾಕಿಸಿ ಅಡಿಕೆ ತೆಂಗಿನ ಮರ ಬೆಳೆಸಿದ್ದಾರೆಂದರೆ ಸರಿ. 8 ರಿಂದ 10 ನೇ ಪ್ರತಿವಾದಿಗಳು ಸಹ ತಮ್ಮ ಭಾಗದ ಜಮೀನಿನಲ್ಲಿ ಗಿಡ ಮರ ಬೆಳೆಸಿ ಸ್ವಾಧೀನದಲ್ಲಿದ್ದಾರೆಂದರೆ ಸರಿ.

ದಾವಾ ಸ್ವತ್ತಿನ ಅಕ್ಕ ಪಕ್ಕದಲ್ಲಿ ನನ್ನ ಜಮೀನು ಯಾವುದು ಇಲ್ಲ. ದಾವಾ ಸ್ವತ್ತಿಗೆ ನನ್ನ ಜಮೀನಿಗೆ 8 ರಿಂದ 10 ಕಿ ಮೀ ದೂರದಲ್ಲಿದೆ ಎಂದರೆ ಸರಿ. 5 ನೇ ವಾದಿ ನಾನು ವಿಶ್ವಾಸಿಕರು ಎಂದರೆ ಸರಿ. 2 ನೇ ಪ್ರತಿವಾದಿ ಕಳೆದ ಬಾರಿ ಗ್ರಾಮ ಪಂಚಾಯಿತಿ ಚುನಾವಣೆಯಲ್ಲಿ ಗೆದ್ದಿದ್ದರು ಎಂದರೆ ಸರಿ. ಚುನಾವಣೆ ವಿಚಾರದಲ್ಲಿ ನನಗೂ ಅವರಿಗೂ ವೈಮನಸ್ಸು ಉಂಟಾಗಿತ್ತು ಎಂದರೆ ಸರಿಯಲ್ಲ. ಆ ಕಾರಣದಿಂದ ನಾನು ಪ್ರತಿವಾದಿಗೆ ತೊಂದರೆ ಕೊಡಲು ವಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳಲು ಬಂದಿರುತ್ತೇನೆಂದರೆ ಸರಿಯಲ್ಲ. ವಾದಿಗಳು ಪ್ರತಿವಾದಿಗಳು ತಮ್ಮ ತಮ್ಮ ಹಿಸ್ಸೆ ಸ್ವತ್ತುಗಳಲ್ಲಿ ಪ್ರತ್ಯೇಕವಾಗಿ ವಾಸ ಮಾಡಿಕೊಂಡಿದ್ದರು ಸಹ ವಾದಿಗಳಿಗೆ ಅನುಕೂಲವಾಗಲೀ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀಸವಾಲುಃ ಪ್ರತಿವಾದಿ 8 ರಿಂದ 10 ಇವರು ಮೇಲೆ ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಳ್ಳುವುದಾಗಿ ತಿಳಿಸಿರುತ್ತಾರೆ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಹಿರಿಯೂರು